ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ಜಿಲ್ಲಾ ಗ್ರಂಥಾಲಯಗಳ ಅಧೀನದಲ್ಲಿ ನಡೆಯುತ್ತಿರುವ ಪಂಚಾಯ್ತಿ ಗ್ರಂಥಾಲಯಗಳಲ್ಲಿ 2728 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಅವರುಗಳು 1 ವರ್ಷದಿಂದ 14 ವರ್ಷಗಳ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಆ) ಗ್ರಾಮ ಪಂಚಾಯ್ತಿಗಳಲ್ಲಿ ಮೇಲ್ವಿಚಾರಕರಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಮಾಸಿಕ ರೂ. 250.00 ಗಳ ಗೌರವ ಸಂಭಾವನೆಯನ್ನು ನೀಡಲಾಗುತ್ತಿದೆ.

ಸದರಿ ಮಾಸಿಕ ಗೌರವ ಸಂಭಾವನೆಯನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು

ಈ) ಪ್ರಸಕ್ತ ನಿಯಮಗಳಲ್ಲಿ ಮಾಸಿಕ ಗೌರವ ಸಂಭಾವನೆ ಪಡೆಯುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸಲು ಅವಕಾಶ ಇರುವುದಿಲ್ಲ.

ಉದ್ಭವಿಸುವುದಿಲ್ಲ.

ತೀರ್ಥಹಳ್ಳಿ ಆಸ್ಪತ್ರೆಗೆ ಬ್ಲಡ್ ಬ್ಯಾಂಕ್ ಮಂಜೂರಾತಿ

1164 (1589) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ಸರ್ಕಾರಿ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ಪ್ರಾರಂಭಿಸಲು ಸರ್ಕಾರ ಯೋಜಿಸಿದೆಯೇ;

ಆ) ಬ್ಲಡ್ ಬ್ಯಾಂಕ್ ಮಂಜೂರಾತಿಗೆ ಬೇಕಾಗಿರುವ ಒಂದು ಕಟ್ಟಡವನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕಟ್ಟಿಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಮಲೆನಾಡಿನ ಕೇಂದ್ರ ಸ್ಥಾನದಲ್ಲಿರುವ ತೀರ್ಥಹಳ್ಳಿಗೆ ಬ್ಲಡ್ ಬ್ಯಾಂಕ್ ಮಂಜೂರಾತಿಯಿಂದ ಪಕ್ಕದ 3-4 ತಾಲ್ಲೂಕುಗಳ ರೋಗಿಗಳಿಗೂ ಅನುಕೂಲವಾಗುವುದರಿಂದ ಈ ಬಗ್ಗೆ ಶೀಘ್ರವಾಗಿ ಮಂಜೂರಾತಿ ನೀಡಲಾಗುವುದೇ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಮಂಡಳಿಯೇ ಒಂದು ಕಟ್ಟಡವನ್ನು ಕಟ್ಟಿರುವುದಾಗಿ ತಿಳಿದು ಬಂದಿದೆ.

ಇ) ಸದ್ಯಕ್ಕೆ ಬ್ಲಡ್ ಬ್ಯಾಂಕ್ ಜಿಲ್ಲಾ ಆಸ್ಪತ್ರೆಗಳಲ್ಲಿ ಮಾತ್ರ ಸ್ಥಾಪಿಸುವ ಉದ್ದೇಶವಿರುತ್ತದೆ.

ಮಂಡ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ದುರಸ್ತಿ ಕಾರ್ಯ ಹಾಗೂ ಹೆಚ್ಚುವರಿ ಕೊಠಡಿ ಸೌಲಭ್ಯ

1165 (1598) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಪದವೀ ಪೂರ್ವ ಕಾಲೇಜು (ಕಲ್ಲು ಕಟ್ಟಡ) ಮಂಡ್ಯ ಇದರ ಕಟ್ಟಡ ಶಿಥಿಲಾವಸ್ಥೆಯಲ್ಲಿರುವುದನ್ನು ಸರ್ಕಾರ ಗಮನಿಸಿದೆಯೆ;

ಅ) ವಿದ್ಯಾರ್ಥಿನಿಗಳ ಸಂಖ್ಯೆಗೆ ಅನುಗುಣವಾಗಿ, ಕೊಠಡಿಗಳಿಲ್ಲದೆ ಪ್ರಸ್ತುತದ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿನಿಯರಿಗೆ ಪ್ರಥಮ ಪಿ.ಯು.ಸಿಗೆ. ಅನುಮತಿಯನ್ನು ನಿರಾಕರಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಟ್ಟಡದ ದುರಸ್ತಿಗಾಗಿ ಹಾಗೂ ಹೆಚ್ಚುವರಿ ಕೊಠಡಿಗಳ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರೋ ಬಿ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು) :

ಅ) ಗಮನಿಸಿದೆ.

ಆ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳು ಸದರಿ ಕಾಲೇಜಿನಲ್ಲಿ ಇದುವರೆವಿಗೂ ಇದ್ದವು. (08 ಬೋಧನಾ ಕೊಠಡಿಗಳು, 03 ಪ್ರಯೋಗಾಲಯ ಕೊಠಡಿಗಳು ಹಾಗೂ 01 ಸಿಬ್ಬಂದಿ ಕೊಠಡಿ ವ್ಯವಸ್ಥೆ ಇರುತ್ತದೆ). ಆದರೆ ಈ ಕಾಲೇಜಿನ ಪಕ್ಕದಲ್ಲೇ ಇದ್ದ ಬಾಲಕಿಯರ ಪದವಿ ಪೂರ್ವ ಕಾಲೇಜಿನಿಂದ ಪದವೀ ಪೂರ್ವ ವಿಭಾಗವನ್ನು 2001-2002ನೇ ಸಾಲಿನಲ್ಲಿ ಬೇರ್ಪಡಿಸಿದ್ದು, ಅಲ್ಲಿದ್ದ ವಿದ್ಯಾರ್ಥಿಯರನ್ನು ಈ ಕಾಲೇಜಿಗೆ ವರ್ಗಾಯಿಸಿದ್ದುದರಿಂದ ಈ ಸಮಸ್ಯೆ ಉದ್ಭವಿಸಿರುತ್ತದೆ.

ಇ) ಈ ಕಾಲೇಜಿಗೆ ಹೆಚ್ಚುವರಿ 10 ಬೋಧನಾ ಕೊಠಡಿಗಳ ಅವಶ್ಯಕತೆಯಿದ್ದು. ಈ ಕೊಠಡಿಗಳ ನಿರ್ಮಾಣಕ್ಕೆ ಅಂದಾಜು ರೂ. 25.00 ಲಕ್ಷಗಳು ಬೇಕಾಗಿದ್ದು ರಾಜ್ಯದ ಅನುದಾನದ ಲಭ್ಯತೆಯನ್ನಾಧರಿಸಿ ಕೊಠಡಿಗಳ ನಿರ್ಮಾಣದ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು. ಈ ಕಟ್ಟಡದ ದುರಸ್ತಿ ಕಾರ್ಯವನ್ನು ಪ್ರಾರಂಭಿಸಿದ್ದು, ಸಧ್ಯದಲ್ಲೇ ಮುಗಿಯಲಿದೆ.

ಮಂಡ್ಯ ಜಿಲ್ಲೆಯಲ್ಲಿ ರಾಜೀವ್‌ಗಾಂಧಿ ಟೆಕ್ನಾಲಜಿ ಮಿಷನ್ ಅಡಿ ಕುಡಿಯುವ ನೀರಿನ ಯೋಜನೆ

1166 (1601) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ "ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್" ಅಡಿಯಲ್ಲಿ ಕುಡಿಯುವ ನೀರಿನ ಯೋಜನೆಯನ್ನೇನಾದರೂ ಸಿದ್ದಪಡಿಸಲಾಗಿದೆಯೆ;

ಆ) ಸಿದ್ದಪಡಿಸಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ, ಕುಡಿಯುವ ನೀರಿನಲ್ಲಿ ಗುಣಮಟ್ಟ ಸಮಸ್ಯೆಯಿರುವಂತಹ ಗ್ರಾಮಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್-ಮಿಷನ್ ಕಾರ್ಯಕ್ರಮದಡಿ 7 ಪರಿಕಲ್ಪಿತ ವಿನ್ಯಾಸ ವರದಿಗಳನ್ನು ಸಿದ್ದಪಡಿಸಲಾಗಿದೆ.

ಆ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಅನುಬಂಧ-1

ಕ್ರಮ ಸಂಖ್ಯೆ	ಪರಿಕಲ್ಪಿತ ವಿನ್ಯಾಸ ವರದಿಯ ವಿವರ	ಅಂದಾಜು ಮೊತ್ತ
1	ಮಂಡ್ಯ ಜಿಲ್ಲೆ ಮಂಡ್ಯ ತಾಲ್ಲೂಕಿನ ಬೇವಕಲ್ ಮತ್ತು ಇತರ 17 ಗ್ರಾಮಗಳಿಗೆ ನೀರು ಸರಬರಾಜು ಯೋಜನೆ	310.00